ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದರ ಎಸ್ಟಿಮೇಟ್ ೧.೪೭ ಲಕ್ಷ ರೂಪಾಯಿ ಮಂಜೂರು ಆಗಿದೆ ಮಂತ್ರಿ ಅದರಿಂದ ೧೫% ಲಕ್ಷ ಎಕರೆ ಅಚ್ಚುಕಟ್ಟಿಗೆ ಅನುಕೂಲವಾಗುತ್ತದೆ ಅದಕ್ಕಾಗಿ ಅವನ್ನು ನಾವು ೧೯೭೭–೭೮ನೇ ಬಜೆಟ್ಟಿನಲ್ಲಿ ಸೇರಿಸಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಗುಬ್ಬಿ ಹಳ್ಳಕ್ಕೆ ಆಡ್ಡಲಾಗಿ ಔಸ್ವಾನ ಗ್ರಾಮದ ಹಾಗೂ ಹೆಸಗೂರು ಗ್ರಾಮದ ಬಸವನ ಕಟ್ಟೆ ಹಳ್ಳದ ಬಳಿಯಿರುವ ನಾಲೆಗಳಿಗೆ ಸಂಬಂಧಿಸಿದಂತೆ ಅಂದಾಜು ತಯಾರು ಆಗಿದೆಯೇ ? ತಯಾರು ಆಗದೇ ಹೋಗಿದ್ದರೆ ಅದಕ್ಕೆ ಕಾರಣವೇನು ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದರ ಬಗ್ಗೆ ಕೆಲವು ವಿವರಗಳು ಬೇಕಾಗಿತ್ತು ಅದಕ್ಕಾಗಿ ಅಸಿಸ್ಟೆಂಟ್ ಇಂಜಿನಿಯರ್, ತರಿಕೆರೆ ಪಿ.ಡಬ್ಲ್ಯೂ.ಡಿ. ಯವರಿಗೆ ಆ ದಾಖಲೆಗಳನ್ನು ತೆಗೆದು ಇಡಲು ಹೇಳಿದ್ದೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಸ್ವಾಮಿ ಚಿಕ್ಕಮಂಗಳೂರು ಜಿಲ್ಲೆಯ ಸಣ್ಣ ನೀರಾವರಿ ಬಗ್ಗೆ ವಿವರ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಆದರೆ ನನಗೆ ತಿಳಿದ ಹಾಗೆ ಸುಮಾರು ೩ ವರ್ಷಗಳಿಂದ ಮಂಡೆನಾಡು ಕ್ಷೇತ್ರದ ಸಣ್ಣ ಸಣ್ಣ ಹಳ್ಳಗಳಲ್ಲಿ ಖಾಯಂ ಆಗಿ ನೀರು ನಿಲ್ಲುವುದರಿಂದ ಅವಕ್ಕೆ ಕೇವಲ ೧೫, ೨೦, ೩೦ ಸಾವಿರ ರೂಪಾಯಿಗಳ ಒಳಗೇ ಖರ್ಚು ಆಗುವುದರಿಂದ ಅಂಥಾ ತಾಮಗಾರಿಗಳ ಪಟ್ಟಿಯನ್ನು ಕೊಟ್ಟಿದ್ದರೂ ಕೂಡ ಈವರೆಗೆ ಮಂಜೂರು ಆಗಿಲ್ಲ. ಮೊನ್ನೆ ಕೂಡ ಇದರ ಬಗ್ಗೆ ತಮಗೆ ಪತ್ರ ಬರೆದಿದ್ದೇನೆ ಅದಕ್ಕೆ ತಾವು ಹಣಕಾಸು ಒದಗಿ ಬಂದಾಗ ಯೋಚನೆ ಮಾಡುತ್ತೇವೆಂದು ಹೇಳಿದ್ದೀರಿ, ಆದುದರಿಂದ ದಯವಿಟ್ಟು ತುರ್ತಾಗಿ ಆಗಬೇಕಾದಂಥ ಕೆಲಸಗಳಿಗೆ ಪ್ರಾಮುಖ್ಯತೆ ಕೊಟ್ಟು ಮಾಡುತ್ತೀರಾ ಸ್ವಾಮಿ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರ ಪರಿಶೀಲನೆ ಮಾಡುತ್ತದೆ.

Delay in construction of Vijayanagar Steel Plant at Hospet

200 SRI K. R. SRINIVASULU NAYUDU (Shantinagar).—Will the Chief Minister be pleased to state :—

(*a*) the stage of construction of Vijayanagar Steel Plant at Hospet ;

(*b*) the reason for the delay in construction;

(*c*) the amount received from the Central Government and amount spent (details may be furnished) ?

SRI D. DEVARAJ URS (Chief Minister).—

(*a*) Preliminary steps are being taken for the implementation of the project.

(*b*) Construction can start only after the detailed project report is received from the consultants.

(c) As detailed below :—

Year	Allotment received Rs.	Amount spent Rs.
1971-72	50 lakhs	43,54 015-21
1972-73	15 lakhs	16,00 474-96
	(excess amount has been spent out of the balance of previous year).	
1973-74	40 lakhs	19,45,861-09
1974-75	26 lakhs	21,75,821-11
1975-76	7,45,000	5,56 344-22
	1,38,45,000	1,09,32 516-17

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯುಡು.— ಸ್ವಾಮಿ, ಈ ಪ್ರಶ್ನೆಯನ್ನು ಸುಮಾರು ೩ ವರ್ಷಗಳಿಂದಲೂ ಸತತವಾಗಿ ಕೇಳುತ್ತಲೇ ಬರುತ್ತಿದ್ದೇವೆ. ಹಣ ಒದಗಿಸುತ್ತೇವೆಂದು ಕೇಂದ್ರ ಸರ್ಕಾರದವರು ಹೇಳುತ್ತಲೇ ಬರುತ್ತಿದ್ದಾರೆ, ಆದುದರಿಂದ ಈಗಲಾದರೂ ಕೇಂದ್ರ ಸರ್ಕಾರದವರ ಮೇಲೆ ಪ್ರಭಾವ ಬೀರಿ ಅದು ನ್ಯಾಶನಲ್ ಪ್ರಾಜೆಕ್ಟ್ ಆಗುವ ಹಾಗೆ ಏರ್ಪಾಡು ಮಾಡುತ್ತೀರಾ ಸ್ವಾಮಿ ?

† ಶ್ರೀ ಡಿ. ದೇವರಾಜ್ ಅರಸ್.— ಈಗಲೂ ಅದು ನ್ಯಾಶನಲ್ ಪ್ರಾಜೆಕ್ಟ್ಸೇ, ಅದನ್ನು ಗೌವರ್ನ್‌ಮೆಂಟ್ ಆಫ್ ಇಂಡಿಯಾ ದವರು ತೆಗೆದುಕೊಂಡಿರುತ್ತಾರೆ, ಅದರ ಬಗ್ಗೆ ಒಂದು ಪ್ರಾಜೆಕ್ಟ್ ರಿಪೋರ್ಟ್ ಬಂದಿದೆ ಎಂದು ಗೊತ್ತಾಗಿದೆ, I am shortly writing a letter to the Government of India to pursue the matter.

1-30 P.M.

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯಿಡು.— ಈ ಯೋಜನೆಯಲ್ಲಿ ಕೇಂದ್ರ ಸರ್ಕಾರದವರಂ ಮತ್ತು ರಾಜ್ಯ ಸರ್ಕಾರದವರು ಈಗಾಗಲೇ ಎರಡೂವರೆ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದಾರೆ. ಈ ಯೋಜನೆ ಸುಮಾರು ೧೫೦೦ ಕೋಟಿ ರೂಪಾಯಿ ಬೆಚ್ಚದ್ದು ಈಗ ಒದಗಿಸಿರುವ ಹಣವನ್ನು ನೋಡಿದರೆ ನಶ್ಯ ಏರಿಸಿದಂತೆ ಕಾಣಿಸುತ್ತದೆ ಈ ಯೋಜನೆಯನ್ನು ಕೇಂದ್ರ ಸರ್ಕಾರದವರು ಈಗ ಕೈಬಿಟ್ಟದ್ದಂತೆ ಕಾಣಿಸುತ್ತದೆ ಎಂದು ಗೊತ್ತಾಗುತ್ತಿದೆ. ಆದುದರಿಂದ, ತಾವು ಕೇಂದ್ರ ಸರ್ಕಾರದ ಮೇಲೆ ಪ್ರಭಾವ ಬೀರಿ ಇದನ್ನು ಕಾರ್ಯಗತ ಮಾಡುತ್ತೇವೆ ಎನ್ನುವ ಭರವಸೆ ಕೊಡುವಿರಾ ?

ಶ್ರೀ ಕೋಣಂದೂರು ಲಿಂಗಪ್ಪ.— ಇದೇ ಒತ್ತಾಯವನ್ನು ಮಾನ್ಯ ಸದಸ್ಯರಂ ಹಿಂದೆ ಏತಕ್ಕೆ ಮಾಡಲಿಲ್ಲ ?

ಶ್ರೀ ಡಿ. ದೇವರಾಜ ಅರಸ್.— ಹಿಂದಿನ ಸರ್ಕಾರ ಮಾಡಲಿಲ್ಲ; ಈಗಿರುವ ಸರ್ಕಾರವಾದರೂ ಮಾಡಲಿ ಎಂದು ಅವರಂ ಒತ್ತಾಯ ಮಾಡಿದರೆ ತಪ್ಪೇನು ? ಈ ಯೋಜನೆಗೆ ಸಂಬಂಧಪಟ್ಟ ಹಾಗೆ ಒಂದು ಬ್ರಾಂಜ್ ಆಫೀಸ್ ಇಲ್ಲಿ ಇದೆ. ಅವರು ನನ್ನನ್ನು ಬಂದು ಮೊನ್ನೆ ಭೇಟಿ ಮಾಡಿ, ಈ ಯೋಜನೆಗೆ ಸುಮಾರು ೧೫೦೦ ಕೋಟಿ ರೂಪಾಯಿಗಳಾಗುತ್ತದೆ ಎಂದು ಹೇಳಿದ್ದಾರೆ. ಅಲ್ಲದೆ, ಈ ಯೋಜನೆಯಂ ಯೋಜನಾ ವರದಿಯು ತಯಾರಾಗಿ ಬಂದಿದೆ. ಈಗಾಗಲೇ ಎರಡೂವರೆ ಕೋಟಿ ರೂಪಾಯಿ ಖರ್ಚಾಗಿರುವ ವಿವರ ಈ ರೀತಿ ಇದೆ: Land acquisition estal lishment, expenses of land acquisition: Rs. 112 lakhs, fees for preparation of the detailed project report: Rs. 48 lakhs, raw materail investigation, soil investigation and services by survey of India and Geological Survey of India;

Rs. 55 lakhs, administration expenses of the Vijayanagar Steel plant Office; Rs. 35 lakhs ... ಹೀಗೆ ಒಟ್ಟು ೨೫೦ ಲಕ್ಷ ರೂಪಾಯಿ ಖರ್ಚಾಗಿದೆ. ಯೋಜನಾ ವರದಿ ಹೋದ ಮೇಲೆ, ಕೇಂದ್ರ ಸರ್ಕಾರದವರು ಆದರ ಬಗ್ಗೆ ದೀರ್ಘವಾಗಿ ಆಥವಾ ತುರ್ತಾಗಿ ಆಲೋಚನೆ ಮಾಡಿ ಮುಂದುವರಿಸುತ್ತಾರೆ ಎನ್ನುವ ನಂಬಿಕೆ ನನಗಿದೆ. ಇದರ ಬಗ್ಗೆ ನಾನು ಕಾಗದ ಬರೆಯುತ್ತಿದ್ದೇನೆ; ಮಾನವಿ ಮಾಡಿಕೊಳ್ಳುತ್ತಿದ್ದೇನೆ. ಇನ್ನು ಸ್ವಲ್ಪ ದಿವಸದಲ್ಲೇ ನಾನು ಕೇಂದ್ರ ಸರ್ಕಾರಕ್ಕೆ ಈ ಬಗ್ಗೆ ಕಾಗದ ಬರೆಯುವವನಿದ್ದೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಐದು ವರ್ಷಗಳ ಹಿಂದೆ ಅಂದಿನ ಪ್ರಧಾನ ಮಂತ್ರಿಯವರು ಈ ಯೋಜನೆಯ ಶಂಕುಸ್ಥಾಪನೆ ಮಾಡಿದಾಗ ಸರ್ಕಾರ ಪುಷ್ಟವೃಷ್ಟಿ ಮಾಡಿತು. ತಮ್ಮ ಪಕ್ಷವೇ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಹೆಚ್ಚು ಒತ್ತಾಯ ಮಾಡಿ ಹಣ ತರಲಿಕ್ಕೆ ತಮಗೆ ಏತಕ್ಕೆ ಶಕ್ತಿ ಇರಲಿಲ್ಲ ?

ಶ್ರೀ ಡಿ. ದೇವರಾಜ ಅರಸ್ — ಆ ಸರ್ಕಾರ ಇದ್ದಾಗ ಬರೀ ಪುಷ್ಪವೃಷ್ಟಿ ಮಾಡುವಷ್ಟೇ ಶಕ್ತಿ ಪಡೆದಿತ್ತು. ಈಗ ಈ ನಿಮ್ಮ ಸರ್ಕಾರ ಅತಿವೃಷ್ಟಿ ಮಾಡುವಷ್ಟು ಶಕ್ತಿ ಪಡೆದಿದೆ. ಇನ್ನು ಮೇಲೆ ಹೆಚ್ಚು ಹಣ ತರುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯಿಡು.— ಈ ಯೋಜನೆಯಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯ ಪೊಂದನ್ನು ಪ್ರಾರಂಭ ಮಾಡಲಾಗುವುದೆಂದು ಹೇಳುತ್ತಿದ್ದರು. ಅದನ್ನೇನಾದರೂ ಕೈಬಿಟ್ಟಿದ್ದೀರಾ ? ಆಥವಾ ಮುಂದುವರಿಸುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.— ಮೊದಲು ಈ ಯೋಜನೆ ಕಾರ್ಯಗತವಾಗಲಿ; ಆಮೇಲೆ ಎಲ್ಲ ವಿಶ್ವವಿದ್ಯಾನಿಲಯಂಗಳನ್ನೂ ಮಾಡೋಣ.

ಶ್ರೀ ಬಿ.ವಿ. ಕಕ್ಕಿಲಾಯ.— ವಿಜಯನಗರ ಉಕ್ಕಿನ ಕಾರ್ಖಾನೆ ಕೆಲಸ ಬಹಳ ಪ್ರಾಮುಖ್ಯ ವಾದುದು. ಕುದುರೆ ಮುಖ ಯೋಜನೆಯಿಂದ ಹೊರದೇಶಗಳಿಗೆ ರಫ್ತು ಮಾಡುವ ಅದಿರಿನಿಂದ ಬರುವ ರಾಯಲ್ಟಿ ಹಣ ಕೇಂದ್ರವಷ್ಟೆದೆ. ಆ ಹಣದಿಂದ ಕೇಂದ್ರ ಸರ್ಕಾರದವರು ವಿಜಯನಗರ ಉಕ್ಕಿನ ಕಾರ್ಖಾನೆಗೆ ಬಂಡವಾಳವನ್ನೊದಗಿಸುವಂತೆ ನಮ್ಮ ಸರ್ಕಾರದವರು ಏತಕ್ಕೆ ಒತ್ತಾಯ ಮಾಡಬಾರದು ?

ಶ್ರೀ ಡಿ. ದೇವರಾಜ ಅರಸ್.— ಕುದುರೆ ಮುಖ ಯೋಜನೆಗೆ ಇರಾನ್‌ನಿಂದ ಸಾಲ ತೆಗೆದು ಕೊಂಡಿರುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ; ಅವರು ಬಂದು ಕೆಲಸ ಮಾಡುತ್ತಿರುವುದೂ ಗೊತ್ತಿದೆ. ಆ ಹಣಕ್ಕೂ ಇದಕ್ಕೂ ಏನು ಸಂಬಂಧ ?

ಶ್ರೀ ಬಿ ವಿ. ಕಕ್ಕಿಲಾಯ.— ನಮ್ಮ ರಾಜ್ಯದ ಅದಿರನ್ನು ಹೊರದೇಶಗಳಿಗೆ ಕಳುಹಿಸುತ್ತಿರು ವುದರಿಂದ ಅದರಿಂದ ಬರುವ ರಾಯಲ್ಟಿ ಕೇಂದ್ರ ಸರ್ಕಾರದಲ್ಲಿದೆ. ನಮ್ಮ ರಾಜ್ಯದಿಂದ ಬಂದ ಹಣ ಅಲ್ಲಿರುವುದರಿಂದ ಅದೇ ಹಣವನ್ನು ಈ ಯೋಜನೆಗೆ ಅವರು ಏತಕ್ಕೆ ವಿನಿಯೋಗಿಸಬಾರದು ?

ಶ್ರೀ ಡಿ. ದೇವರಾಜ ಅರಸ್ — ಯೋಜನಾ ವರದಿ ತಯಾರಾಗಿರುವುದು ಮೊನ್ನೆ ಮೊನ್ನೆ. ಇದನ್ನು ಸ್ಟೀಲ್ ಅಥಾರಿಟ್ ಆಫ್ ಇಂಡಿಯಾ ಸಂಸ್ಥೆಯವರು ಪರಿಶೀಲನೆ ಮಾಡುತ್ತಿದ್ದಾರಂತೆ. ಆದು ಬಂದಮೇಲೆ ಸುಮಾರು ೧೫೦೦ ಕೋಟಿ ರೂಪಾಯಿಗಳ ವೆಚ್ಚದ ಈ ಯೋಜನೆ ೧೯೮೨-೮೩ ನೇ ವರ್ಷಕ್ಕೆ ಸಂಪೂರ್ಣವಾಗಿ ಆಗಬೇಕೆನ್ನುವ ಉದ್ದೇಶವಿದೆಯಂತೆ. ಈ ಯೋಜನೆಯಲ್ಲಿ ಮೂರು ಮಿಲಿಯನ್ ಟನ್ ಉಕ್ಕು ಪರಮಾವಧಿ ಉತ್ಪಾದನೆ ಮಾಡಬೇಕೆಂದಿದೆ. ಇದರಿಂದ ಒಟ್ಟಾರೆ ಶೇಕಡ ಎಂಟರಷ್ಟು ವಿದೇಶಿ ವಿನಿಮಯ ಬರುತ್ತದೆ ಎಂದು ಹೇಳಲಾಗುತ್ತಿದೆ. ಇದರಲ್ಲಿ ಫಾರಿನ್ ಕೊಲ್ಯಾಬ ರೇಷನ್ ಇಲ್ಲ; ಬಹುಶಃ ಇಂಡಿಜೀನಿಯಸ್ ಆಗಿ ತೆಗೆದುಕೊಳ್ಳಲಾಗುವುದೆಂದು ಹೇಳಲಾಗುತ್ತಿದೆ. ಇನ್ನು ಸಾಲ ತೆಗೆದುಕೊಳ್ಳುವ ವಿಚಾರ ನಾವು ಹೇಳುವುದಕ್ಕೆ ಬರುವುದಿಲ್ಲ ಇರಾನಿನವರು ಕೊಡುತ್ತಾರೋ ಆಥವಾ ಬೇರೊಬ್ಬರು ಕೊಡುತ್ತಾರೋ ಅದು ಕೇಂದ್ರಕ್ಕೆ ಸಂಬಂಧಪಟ್ಟದ್ದು; ನಾವೂ ನಿವೂ ಇದರಲ್ಲಿ ಸಲಹೆ ಕೊಡುತ್ತೇವೆ ಅಷ್ಟೆ.

ಶ್ರೀ ಕೆ.ಆರ್. ಶ್ರೀನಿವಾಸುಲು ನಾಯಿಡು — ಮಾನ್ಯ ಮುಖ್ಯ ಮಂತ್ರಿಗಳ ನೀಡುತ್ತಿರುವ ಉತ್ತರ ನೋಡಿದರೆ, ಈ ೧೫೦೦ ಕೋಟಿ ರೂಪಾಯಿಗಳ ಈ ಯೋಜನೆ ಖಂಡಿತವಾಗಿ ಕೇಂದ್ರದವರು ಮಾಡುವುದಿಲ್ಲವೆಂದು ನನಗನ್ನಿಸುತ್ತಿದೆ. ಆದರೆ, ನಮ್ಮ ರಾಜ್ಯ ಸರ್ಕಾರದವರು ಫಾರಿನ್ ಕೊಲ್ಯಾಬ ರೇಷನ್ ಮಾಡಿಕೊಂಡು ನಾಲ್ಕೈದು ಪ್ಲಾಂಟ್‌ಗಳನ್ನು ಏತಕ್ಕೆ ಪ್ರಾರಂಭ ಮಾಡಬಾರದು ?

ಶ್ರೀ ಡಿ. ದೇವರಾಜ ಅರಸ್.— ಫಾರಿನ್ ಕೊಲ್ಯಾಬರೇಷನ್ ಮಾಡುವುದಾಗಲೀ ಬೇರೆ ದೇಶದ ಬ್ಯಾಂಕಿನಿಂದ ಹಣ ತರುವುದಾಗಲೀ ರಾಜ್ಯ ಸರ್ಕಾರ ಒಂಟಿಯಾಗಿ ಮಾಡುವುದಕ್ಕಾಗುವುದಿಲ್ಲ. ಕೇಂದ್ರದ ಮುಖಾಂತರವೇ ಮಾಡಬೇಕು. ಆದುದರಿಂದ, ಮಾನ್ಯ ಸದಸ್ಯರ ಪ್ರಶ್ನೆಗೆ ಏನೆಂದು ಉತ್ತರ ಹೇಳಲಿ? ಆದುಂ ಕೇಂದ್ರಕ್ಕೆ ಬಿಟ್ಟಿದ್ದು.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ಸದಸ್ಯರನ್ನು ತಾವು ಕೈಗಾರಿಕಾ ಮಂತ್ರಿಗಳನ್ನಾಗಿ ಮಾಡಿ; ಅವರು ಈ ಯೋಜನೆಯನ್ನು ಬೇಗ ಕಾರ್ಯರೂಪಗೊಳಿಸುತ್ತಾರೆ.

ಶ್ರೀ ಡಿ. ದೇವರಾಜ ಅರಸ್.— ಅವರಿಗಿಂತಲೂ ನಿಮ್ಮ ಕೈಗೆ ಬಂದರೆ ನೀವು ಚೆನ್ನಾಗಿ ಮಾಡುತ್ತೀರಿ.

ಶ್ರೀ ಕಾಗೋಡು ತಿಮ್ಮಪ್ಪ.— ಮಾನ್ಯ ನಾಯಿಡೂ ಅವರಿಗೂ ಒಂದಾರು ತಿಂಗಳು ಅವಕಾಶ ಕೊಡಿ.

ಶ್ರೀ ಡಿ. ದೇವರಾಜ ಅರಸ್.— ಸರಿ. ತಮ್ಮ ಶಿಫಾರಸನ್ನು ಗಮನಿಸೋಣ

Construction of Hospital building at Dandinashivara, Turuvekere Taluk.

167. SRI B. BYRAPPAJI (Turuvekere).— Will the Minister for Health be pleased to state.—

(*a*) whether it is a fact that the people of Dandinashivara have, by public contribution, constructed and donated a hospital building for the Government hospital;

(*b*) if so, the year in which the building was constructed and was handed over;

(*c*) whether the Government has taken the possession of the building;

(*d*) if not, the reasons therefor;

(*e*) whether it has come to the notice of the Government that the building is dilapidated due to non-repairs, annualy to the said building;

(*f*) if so, whether the Public Works Department would takeover the building and immediately arrange for annual repairs?

SRI H. M. CHANNABASAPPA (Minister for Health).—

(*a*) Yes.

(*b*) The building was construct d on 25th May 1957.

(*c*) No.

(*d*) Registered Gift deed of Panchayat has been received by the Director of Health and Family Planning on 13rd March 1977. This Gift deed document is under the consideration of the Government at present.